ಆ) ಒತ್ತುವರಿಯಾದ ಅರಣ್ಯ ಪ್ರದೇಶ 299 67 ಹೆಕ್ಟೇರು

ಇ) 1978ರ ಪೂರ್ವದಲ್ಲಿ ಆದ ಅರಣ್ಯ ಒತ್ತುವರಿವನ್ನು ಸರ್ಕಾರದ ಆದೇಶ ಸಂಖ್ಯೆ ಅಪಜೀ 05 ಎಫ್‌ಜೆಎಲ್ 90, ದಿನಾಂಕ 05 05 1997 ರ ಪ್ರಕಾರ ಪರಿಶೀಲಿಸಿ ಸಕ್ರಮಗೊಳಿಸಲು ಯೋಗ್ಯವಾಗಿರುವ ಪ್ರಕರಣಗಳನ್ನು ಸಕ್ರಮಗೊಳಿಸಲಾಗುತ್ತಿದೆ ಉಳಿದ ಪ್ರಕರಣಗಳಲ್ಲಿ ಅರಣ್ಯ ಕಾಯ್ದೆ 1963ರ ಪ್ರಕಾರ ಅನಧಿಕೃತ ಒತ್ತುವರಿ ತೆರವುಗೊಳಿಸಿ ಅರಣ್ಯ ಭೂಮಿಯನ್ನು ಇಲಾಖೆಯ ವಶಕ್ಕೆ ತೆಗೆದುಕೊಳ್ಳಲು ಕ್ರಮವಹಿಸಲಾಗುತ್ತಿದೆ

ಈ) ಈ ಮೇಲಿನಂತೆ ಕ್ರಮ ವಹಿಸಲಾಗುತ್ತಿದೆ

ಉ)

ವರ್ಷ	ಖರ್ಚು (ರೂ)
2002–03	882574
2003–04	346700
2004–05	248710
2005–06	761720
2006–07	227096
ಒಟ್ಟು	2466800

ಒಂದು ಸಸಿಯನ್ನು ನೆಟ್ಟು ಮುಂದಿನ ಮೂರು ವರ್ಷಗಳವರೆಗೆ ಪೋಷಿಸಿ ಬೆಳೆಸಲು ಖರ್ಚಾಗುವ ಅಂದಾಜು ಹಣ ಈ ಕೆಳಗಿನಂತಿದೆ, ನೆಡುತೋಪುಗಳಲ್ಲಿ ಬೆಳೆಸಿದ ಸಸಿಗೆ ರೂ 54/– ರಸ್ತೆ ಬದಿಯಲ್ಲಿ ಬೆಳೆಸಿದ ಸಸಿಗೆ ರೂ 328/– (ರಕ್ಷಾ ಕವಚ ಮತ್ತು ನೀರು ಉಣಿಸುವ ಖರ್ಚು ಇತ್ಯಾದಿ ಸೇರಿ)

ಊ) ಈ ತಾಲ್ಲೂಕಿನಲ್ಲಿ 01 04 2002 ರಿಂದ ಇಲ್ಲಿಯವರೆಗೆ ಒಟ್ಟು 284 39 ಹೆಕ್ಟೇರು ಪ್ರದೇಶದಲ್ಲಿ 191600 ಸಸಿಗಳನ್ನು ನೆಡಲಾಗಿದೆ ಸದರಿ ಸಸಿಗಳ ರಕ್ಷಣೆಗೆ ನೆಟ್ಟ ವರ್ಷದಿಂದ ಮುಂದಿನ ಮೂರು ವರ್ಷಗಳವರೆಗೆ ಕಾವಲುಗಾರರನ್ನು ನೇಮಿಸಿ, ಸಂರಕ್ಷಣಾ ಕ್ರಮ ಕೈಗೊಳ್ಳಲಾಗುತ್ತಿದೆ

22 (47) ಶ್ರೀ ಸಿದ್ದು ಸಾವದಿ (ಜಮಖಂಡಿ) ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಜಮಖಂಡಿ ತಾಲ್ಲೂಕಿನಲ್ಲಿರುವ ಕೆರೆಗಳ ಸಂಖ್ಯೆ ಹಾಗೂ ಅವುಗಳ ನೀರಿನ ಸಾಮರ್ಥ್ಯ ಎಷ್ಟು , (ಕೆರೆವಾರು ವಿವರ ನೀಡುವುದು)

ಆ) ಈ ಕೆರೆಗಳಲ್ಲಿ ಒತ್ತುವರಿ ಆಗಿರುವ ಹಾಗೂ ಹೂಳು ತುಂಬಿರುವ ಕೆರೆಗಳು ಎಷ್ಟು (ಒತ್ತುವರಿ ವಿಸ್ತೀರ್ಣದ ವಿವರ ಒದಗಿಸುವುದು),

ಇ) ಈ ಕೆರೆಗಳನ್ನು ಅಭಿವೃದ್ಧಿಪಡಿಸಲು ಎಷ್ಟು ಹಣ ಖರ್ಚು ಮಾಡಲಾಗಿದೆ ,

ಈ) ಈ ಎಲ್ಲಾ ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಏನಾದರೂ ಸರ್ಕಾರದ ಆಲೋಚನೆಯಲ್ಲಿದೆಯೇ, ಮತ್ತು ಇದರ ಆರಂಭ ಎಂದು ಮಾಡಲಾಗುವುದು ,

ಉ) ಜಮಖಂಡಿ ತಾಲ್ಲೂಕಿನ ಹೊಸ ಕೆರೆಗಳನ್ನು ನಿರ್ಮಿಸುವ ಯೋಜನೆ ಸರ್ಕಾರದ ಆಲೋಚನೆಯಲ್ಲಿದೆಯೇ ,

ಶ್ರೀ ಬಿ ಎಸ್ ಯಡಿಯೂರಪ್ಪ (ಉಪಮುಖ್ಯಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು)

ಅ)

ಕ್ರ.ಸಂ	ಕೆರೆಯ ಹೆಸರು	ನೀರಿನ ಸಾಮರ್ಥ್ಯ (ಎಂಸಿಎಫ್‌ಟಿ ಗಳಲ್ಲಿ)
1	ತೊದಲಬಾಗಿ ಕೆರೆ	56 71
2	ಕನ್ನೊಳ್ಳಿ ಕೆರೆ	17 82
3	ಗದ್ಯಾಳಕೆರೆ (ಹಳೆಯ)	4 35
4	ಕುರಗೋಡ ಕೆರೆ	7 19
5	ಖಾಜಿ ಬೀಳಗಿ ಕೆರೆ	18 89
6	ತುಂಗಳ ಕೆರೆ	4 40
7	ಗದ್ವಾಳ ಕೆರೆ	15 00
8	ನಟಕಲ್ ಕೆರೆ	3 50
9	ಕಲ್ಲಹಳ್ಳಿ ಚಿರುಗು ಕೆರೆ	2 07
	ಒಟ್ಟು	129 93

ಆ) ಈ ಕೆರೆಗಳಲ್ಲಿ ಒತ್ತುವರಿ ಆಗಿರುವುದಿಲ್ಲ ಮೇಲಿನ 9 ಕೆರೆಗಳಲ್ಲಿ 8 ಕೆರೆಗಳಲ್ಲಿ ಸುಮಾರು ಒಟ್ಟು ಕೆರೆಗಳ ಸಾಮರ್ಥ್ಯದ ಪ್ರತಿಶತ 20 ರಿಂದ 35 ರಷ್ಟು ಹೂಳು ತುಂಬಿರುತ್ತದೆ

ಇ)

ವರ್ಷ	ಖರ್ಚು ಮಾಡಿರುವ ಮೊತ್ತ (ರೂ ಲಕ್ಷಗಳಲ್ಲಿ)
2003–04	10 67
2004–05	4 74
2005–06	6 56
2006–07 (ಡಿಸೆಂಬರ್ 2006ರ ಅಂತ್ಯದವರೆಗೆ	4 63
ಒಟ್ಟು	26 60

ಈ) ಜಮಖಂಡಿ ತಾಲ್ಲೂಕಿನ 07 ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ದಿನಾಂಕ 16 01 2007 ರಂದು ಚಾಲನೆ ನೀಡಲಾಗಿದೆ

ಇ) ಇದೆ

23 (48) ಶ್ರೀ ಸಿದ್ದು ಸಾವದಿ (ಜಮಖಂಡಿ) ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಜಮಖಂಡಿಯಲ್ಲಿ ಅರಣ್ಯ ಇಲಾಖೆಗೆ ಸೇರಿದ ಪ್ರವಾಸಿಮಂದಿರದ ಈಗಿನ ಸ್ಥಿತಿ ಸರ್ಕಾರದ ಗಮನದಲ್ಲಿದೆಯೇ ,

ಆ) ಈ ಪ್ರವಾಸಿ ಮಂದಿರದ ದುರಸ್ಥಿ ಮಾಡಿ ನವೀಕರಿಸುವ ಯೋಜನೆ ಸರ್ಕಾರಕ್ಕಿದೆಯೇ ,

ಇ) ಹಾಗಿದ್ದಲ್ಲಿ, ಯಾವಾಗ ನವೀಕರಣ ಮಾಡಲಾಗುವುದು ,

ಈ) ಪ್ರವಾಸಿ ಮಂದಿರವನ್ನು ನವೀಕರಿಸಲು ತಗಲುವ ಅಂದಾಜು ವೆಚ್ಚವೆಷ್ಟು ,

ಉ) ಪ್ರವಾಸಿ ಮಂದಿರದ ರಸ್ತೆ ನಿರ್ಮಾಣ ನವೀಕರಣ ಅಂದಾನಿನ್ನಲಿಯೇ ಸೇರಿದೆಯೇ ?

ಶ್ರೀ ಸಿ ಚನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಇದೆ

ಆ) ಇದೆ

ಇ) ಅನುದಾನ ಪ್ರಾಪ್ತವಾದ ನಂತರ ನವೀಕರಣ ಮಾಡಲಾಗುವುದು